## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಭೀಮಾ ನದಿಯ ಯಾದಗಿರಿ ಬ್ಯಾರೇಜ್‌ನ ಹಿನ್ನೀರಿನಿಂದ ನೀರನ್ನು ಲಿಫ್ಟ್ ಮುಖಾಂತರ ಯಾದಗಿರಿ ತಾಲ್ಲೂಕಿನಡಿಯ 35 ಸಣ್ಣ ನೀರಾವರಿ ಹಾಗೂ ಜಿಲ್ಲಾ ಪಂಚಾಯತ್ ಕೆರೆಗಳನ್ನು ತುಂಬುವ ಯೋಜನೆಗೆ ಅವಶ್ಯವಿರುವ 0.806 ಟಿಎಂಸಿ ನೀರನ್ನು ಹೊಸ ಸೊಂತಿ ಏತ ನೀರಾವರಿ ಯೋಜನೆಯಡಿ ಸಣ್ಣ ನೀರಾವರಿ ಕೆರೆಗಳ ನೀರಿನ ಹಂಚಿಕೆಯಲ್ಲಿ ಪರಿಗಣಿಸಿ ರೂ.440.00ಕೋಟಿ ಅಂದಾಜು ಮೊತ್ತದ ವಿವರವಾದ ಯೋಜನಾ ವರದಿಗೆ ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ.

****

ಓದಲಾಗಿದೆ:- ಪತ್ರ ಸಂಖ್ಯೆ:ವ್ಯನಿ/ಕೃಭಾಜನಿನಿ/35 ಕರೆ ತುಂಬುವ ಯೋಜನೆ/ತಾಂತ್ರಿಕ/2017-18/1303 ದಿನಾಂಕ:10/07/2017.

ಪ್ರಸ್ತಾವನೆ:

ವ್ಯವಸ್ಥಾಪಕ ನಿರ್ದೇಶಕರು, ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ ರವರು ಮೇಲೆ ಓದಲಾದ ಪತ್ರದಲ್ಲಿ ಭೀಮಾ ನದಿಯ ಯಾದಗಿರಿ ಬ್ಯಾರೇಜ್‌ನ ಹಿನ್ನೀರಿನಿಂದ ನೀರನ್ನು ಲಿಫ್ಟ್ ಮುಖಾಂತರ ಯಾದಗಿರಿ ತಾಲ್ಲೂಕಿನಡಿಯ 35 ಸಣ್ಣ ನೀರಾವರಿ ಹಾಗೂ ಜಿಲ್ಲಾ ಪಂಚಾಯತ್ ಕೆರೆಗಳನ್ನು ತುಂಬುವ ಯೋಜನೆಗೆ ಅವಶ್ಯವಿರುವ 0.806 ಟಿಎಂಸಿ ನೀರನ್ನು ಸಣ್ಣ ನೀರಾವರಿ ಕೆರೆಗಳ ನೀರಿನ ಹಂಚಿಕೆಯಡಿ ಪರಿಗಣಿಸಿ ರೂ.440.00ಕೋಟಿ ಅಂದಾಜು (2016-17ನೇ ಸಾಲಿನ ಜಲಸಂಪನ್ಮೂಲ ಇಲಾಖೆ, 2015-16ನೇ ಸಾಲಿನ KUWS & DB ಮತ್ತು PWP& IWDT ಕಲಬುರಗಿ ವೃತ್ತ ದರಪಟ್ಟಿಯ ದರಗಳಂತೆ) ಮೊತ್ತದ ವಿವರವಾದ ಯೋಜನಾ ವರದಿಗೆ ಆಡಳಿತಾತ್ಮಕ ಅನುಮೋದನೆ ಕೋರಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಪ್ರಸ್ತಾವನೆಯನ್ನು ದಿನಾಂಕ:08/05/2017 ರಂದು ಜರುಗಿದ ನಿಗಮದ 31ನೇ ಅಂದಾಜು ಪರಿಶೀಲನಾ ಸಮಿತಿಯ ಮುಂದೆ ಯಾದಗಿರಿ ತಾಲ್ಲೂಕಿನಡಿಯ 35 ಸಣ್ಣ ನೀರಾವರಿ ಹಾಗೂ ಜಿಲ್ಲಾ ಪಂಚಾಯತ್ ಕೆರೆಗಳನ್ನು ತುಂಬುವ ಯೋಜನೆಯ ಪ್ರಸ್ತಾವನೆಯನ್ನು ಮಂಡಿಸಲಾಗಿದ್ದು, ಸಮಿತಿಯು ಸರ್ಕಾರದಿಂದ ಆಡಳಿತಾತ್ಮಕ ಅನುಮೋದನೆ ಹಾಗೂ ಯೋಜನೆಗೆ ಅವಶ್ಯವಿರುವ 0.806 ಟಿ.ಎಂ.ಸಿ. ನೀರನ್ನು ಸಣ್ಣ ನೀರಾವರಿ/ಜಿಲ್ಲಾ ಪಂಚಾಯತ್ ಕೆರೆಗಳ ನೀರಿನ ಹಂಚಿಕೆಯಡಿ ಪರಿಗಣಿಸಿ ನಿಗಮದ ನಿರ್ದೇಶಕರ ಮಂಡಳಿಯ ಮುಂದೆ ಮಂಡಿಸಲು ಶಿಫಾರಸ್ಸು ಮಾಡಿರುವುದಾಗಿ ವರದಿ ಮಾಡಿರುತ್ತಾರೆ.

ನಿಗಮದ ಅಂದಾಜು ಪರಿಶೀಲನಾ ಸಮಿತಿಯ ಶಿಫಾರಸ್ಸಿನನ್ವಯ ಸದರಿ ಯೋಜನೆಯ ಪ್ರಸ್ತಾವನೆಯನ್ನು ದಿನಾಂಕ:10.05.2017 ರಂದು ಜರುಗಿದ ನಿಗಮದ 111ನೇ ನಿಗಮದ ನಿರ್ದೇಶಕರ ಮಂಡಳಿಯ ಸಭೆಯ ಮುಂದೆ ಮಂಡಿಸಲಾಗಿದ್ದು, ನಿರ್ದೇಶಕರ ಮಂಡಳಿಯು ಅಂದಾಜು ಪರಿಶೀಲನಾ ಸಮಿತಿಯ ಶಿಫಾರಸ್ಸಿನನ್ವಯ ಭೀಮಾ ನದಿಯ ಯಾದಗಿರಿ ಬ್ಯಾರೇಜ್ ಹಿನ್ನೀರಿನಿಂದ ನೀರನ್ನು ಲಿಫ್ಟ್ ಮುಖಾಂತರ ಯಾದಗಿರಿ ತಾಲ್ಲೂಕಿನಡಿಯ 35 ಸಣ್ಣ ನೀರಾವರಿ ಹಾಗೂ ಜಿಲ್ಲಾ ಪಂಚಾಯತ್ ಕೆರೆಗಳನ್ನು ತುಂಬಿಸುವ ಯೋಜನೆ ಅನುಷ್ಠಾನಕ್ಕೆ ಅವಶ್ಯವಿರುವ 0.806ಟಿಎಂಸಿ ನೀರನ್ನು ಸಣ್ಣ ನೀರಾವರಿ ಕೆರೆಗಳ ನೀರಿನ ಹಂಚಿಕೆಯಡಿ ಪರಿಗಣಿಸುವ ಕೋರಿಕೆಯೊಂದಿಗೆ ಹಾಗೂ ರೂ.440.00 ಕೋಟಿ ಅಂದಾಜು ಮೊತ್ತದ ಪ್ರಸ್ತಾವನೆಯನ್ನು ಸರ್ಕಾರದ ಆಡಳಿತಾತ್ಮಕ ಅನುಮೋದನೆಗಾಗಿ ಸಲ್ಲಿಸಲು ಮಂಡಳಿ ಸಭೆಯು ಅನುಮೋದಿಸಿರುವುದಾಗಿ ವರದಿ ಮಾಡಲಾಗಿದೆ.

ಅದರಂತೆ, ವ್ಯವಸ್ಥಾಪಕ ನಿರ್ದೇಶಕರು, ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ ರವರು, ಸದರಿ ಯೋಜನೆಯನ್ನು ಸರ್ಕಾರವು ಅನುಷ್ಠಾನಗೊಳಿಸಲಾಗುವುದೆಂದು 2017-18 ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಘೋಷಿಸಿರುವ ಹಿನ್ನೆಲೆಯಲ್ಲಿ, 2016-17ನೇ ಸಾಲಿನ ಜಲ ಸಂಪನ್ಮೂಲ ಇಲಾಖೆಯ ದರಪಟ್ಟಿಯಗಳನ್ವಯ ರೂ.440.00ಕೋಟಿ ಅಂದಾಜು ಮೊತ್ತದ ಹೊಸ ಯೋಜನೆ ಅನುಷ್ಠಾನಕ್ಕಾಗಿ ಆಡಳಿತಾತ್ಮಕ ಅನುಮೋದನೆ ಕೋರಿ ವ್ಯವಸ್ಥಾಪಕ ನಿರ್ದೇಶಕರು, ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತರವರು ಪ್ರಸ್ತಾವನೆ ಸಲ್ಲಿಸಿರುತ್ತಾರೆ.



Scanned with CamScanner

ಪ್ರಸ್ತಾವನೆಯಲ್ಲಿನ ಅಂಶಗಳನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಗಿನಂತೆ ಆದೇಶ ಹೊರಡಿಸಿದೆ.

**<u>ಸರ್ಕಾರಿ ಆದೇಶ ಸಂಖ್ಯೆ: ಜಸಂಇ 135 ಕೆಬಿಎನ್ 2017, ಬೆಂಗಳೂರು ದಿನಾಂಕ:08/11/2017</u>**

ಭೀಮಾ ನದಿಯ ಯಾದಗಿರಿ ಬ್ಯಾರೇಜ್‌ನ ಹಿನ್ನೀರಿನಿಂದ ನೀರನ್ನು ಲಿಫ್ಟ್ ಮುಖಾಂತರ ಯಾದಗಿರಿ ತಾಲ್ಲೂಕಿನಡಿಯ 35 ಸಣ್ಣ ನೀರಾವರಿ ಹಾಗೂ ಜಿಲ್ಲಾ ಪಂಚಾಯತ್ ಕೆರೆಗಳನ್ನು ತುಂಬುವ ಯೋಜನೆಗೆ ಅವಶ್ಯವಿರುವ 0.806 ಟಿಎಂಸಿ ನೀರನ್ನು ಹೊಸ ಸೊಂತಿ ಏತ ನೀರಾವರಿ ಯೋಜನೆಯಡಿ ಸಣ್ಣ ನೀರಾವರಿ ಕೆರೆಗಳ ನೀರಿನ ಹಂಚಿಕೆಯಾಗಿರುವ ಪ್ರಮಾಣದಲ್ಲಿ ಪರಿಗಣಿಸಿ ರೂ.440.00ಕೋಟಿ ಅಂದಾಜು ಮೊತ್ತದ ವಿವರವಾದ ಯೋಜನಾ ವರದಿಗೆ ಆಡಳಿತಾತ್ಮಕ ಅನುಮೋದನೆ ನೀಡಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ:ಆಇ 428 ಆಕೋ–1/2017, ದಿನಾಂಕ:12.10.2017ರಲ್ಲಿ ಹಾಗೂ ಯೋಜನಾ ಇಲಾಖೆಯ ಟಿಪ್ಪಣಿ ಸಂಖ್ಯೆ:ಪಿಡಿ 41 ಎಂಸಿಎಂ 2017, ದಿನಾಂಕ:19.07.2017ರಲ್ಲಿ ನೀಡಿರುವ ಸಹಮತಿಯಂತೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಬಿ. ಹರಿನಾರಾಯಣ)
ಸರ್ಕಾರದ ಅಧೀನ ಕಾರ್ಯದರ್ಶಿ(ಕೃಭಾಜನಿ)
ಜಲ ಸಂಪನ್ಮೂಲ ಇಲಾಖೆ.

ಪ್ರತಿಯನ್ನು:

1. ಮಹಾಲೇಖಪಾಲರು (ಲೆಕ್ಕಪತ್ರ ಮತ್ತು ಆಡಿಟ್), ಕರ್ನಾಟಕ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ಸರ್ಕಾರದ ಕಾರ್ಯದರ್ಶಿಗಳು, ಸಣ್ಣ ನೀರಾವರಿ ಇಲಾಖೆ, ವಿಕಾಸ ಸೌಧ, ಬೆಂಗಳೂರು..
4. ವ್ಯವಸ್ಥಾಪಕ ನಿರ್ದೇಶಕರು, ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ, ಬೆಂಗಳೂರು.
5. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಜಲ ಸಂಪನ್ಮೂಲ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳು.
6. ಸರ್ಕಾರದ ಕಾರ್ಯದರ್ಶಿಗಳು, ಜಲ ಸಂಪನ್ಮೂಲ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳು.
7. ಮಾನ್ಯ ಜಲ ಸಂಪನ್ಮೂಲ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
8. ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು (ಸಚಿವ ಸಂಪುಟ) ವಿಧಾನ ಸೌಧ, (ಉಲ್ಲೇಖ: ಪ್ರಕರಣ ಸಂಖ್ಯೆ:ಸಿ–700/2017 ರಂತೆ)
9. ನಿರ್ದೇಶಕರು,- ಸಂಪೂರ್ಣ ಯೋಜನಾ ವಿಭಾಗ, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
10. ಸರ್ಕಾರದ ಉಪ ಕಾರ್ಯದರ್ಶಿಗಳು (ಕೃಭಾಜನಿ/ಎಂಎಂಐ) ಜಲ ಸಂಪನ್ಮೂಲ ಇಲಾಖೆ.
11. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ಲೋಇ–ಆಕೋ–1), ವಿಧಾನ ಸೌಧ, ಬೆಂಗಳೂರು.
12. ಶಾಖಾ ರಕ್ಷಾ ಕಡತ/ಹೆಚ್ಚಿನ ಪ್ರತಿಗಳು.



Scanned with CamScanner

# KRISHNA BHAGYA JALA NIGAMA LIMITED

(A GOVERNMENT OF KARNATAKA UNDERTAKING)

| | | |
|---|---|---|
| | | Office of the<br>Executive Engineer,<br>KBJNL, Sonthi L.I.Division,<br>Khanapur Camp – 585319,<br>Shahapur Tq., Yadgir Dist.<br>Email: eeslikpur@gmail.com |

NO: KBJNL / SLI Divn / PB-1 / 2020-21 / 642 Dated: 11-01-2021

**Translated Copy**

Subject : Filling up of 35 Minor Irrigation and Zilla Panchayat Tanks using 0.806 TMC water from backwater of Yadgir Barrage on Bhima River through New Sonthi Lift irrigation Scheme using Minor Irrigation allocation and an administration approval is provided for 440 Crores based on estimate report submitted.

As Read:- Letter No: MD/ KBJNL/35 tank filling scheme/ technical/ 2017-18/1303 dated 10/07/2017

Proposal:

Anent to above mentioned letter, Managing Director, Krishan Bhagya Jala Nigam has submitted a estimate report (using 2019-17 Water Resources Schedule of rate, 2015-16 KUWS & DB and PWP&IWDT Kalburgi Zone Schedule of Rates) for Filling up of 35 Minor Irrigation and Zilla Panchayat Tanks using 0.806 TMC water from backwater of Yadgir Barrage on Bhima River through New Sonthi Lift irrigation Scheme using Minor Irrigation allocation and has sought administration approval 440 Crores based on details enclosed in estimate report.

Proposal has also been placed on 31st Estimate review committee dated 08/05/2017 for Filling up of 35 Minor Irrigation and Zilla Panchayat Tanks using 0.806 TMC water from backwater of Yadgir Barrage on Bhima River through New Sonthi Lift irrigation Scheme using Minor Irrigation allocation and the committee has recommended managing director to place this report to Board for further approval.

Nigams Estimate report committee proposal has been placed to 111st Nigams Board on 10.05.2017 for further approval, Board members have approved the project Filling up of 35 Minor Irrigation and Zilla Panchayat Tanks using 0.806 TMC water from backwater of Yadgir Barrage on Bhima River through New Sonthi Lift irrigation Scheme using Minor Irrigation allocation and has recommended to seeks administration approval 440 Crores from Government of Karnataka

Accordingly, Managing Director, Krishan Bhagya Jala Nigam has highlighted the project was announced in State government Budget for the year 2017-18 and the Project report was made using

the Schedule of Rates Water resources department for the year2016-17 and an amount of 440 crores was sought as Administrative approval for this new scheme.

After analyzing the proposal, following orders are passed

**Government Order No: WRD 135 KBN 2017, Bangalore Dated: 08/11/2017**

Based on the Report submitted for filling up of 35 Minor Irrigation and Zilla Panchayat Tanks using 0.806 TMC water from backwater of Yadgir Barrage on Bhima River through New Sonthi Lift irrigation Scheme using Minor Irrigation allocation and an administration approval is provided for 440 Crores.

This order will be listed in Finance department listing Number: FD 428 Ako – 1/2017, dated 12.10.2017 and based on Scheme implementing department listing number: PD 41 MCM2017, dated 19.07.2017 approval has been provided

Executive Engineer,
KBJNL, Sonthi L.I. Division,
Khanapur Camp